PW-3

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ ನ್ಯಾಯಾಲಯ, ಸುಳ್ಯ, ದ.ಕ

**M.V.C.No.**1386/2022

| | |
|---|---|
| ಹೆಸರು | :ಪ್ರಸನ್ನ |
| ತಂದೆಯ ಹೆಸರು | :ಮುರಳೀಧರ್ ಎ |
| ಪ್ರಾಯ | :35 ವರ್ಷ |
| ಉದ್ಯೋಗ | :ಬ್ಯಾಂಕ್ ನೌಕರ |
| ವಾಸ | :ಅಡ್ಕಾರು, ಜಾಲ್ಸೂರು ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 03.06.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ.ಕೆ.ಪಿ ರವರಿಂದಃ**

ನಾನು ಕೆಎ-12-ಇ-3812 ದ್ವಿಚಕ್ರ ವಾಹನದ ಆರ್.ಸಿ ಮಾಲೀಕ ಹಾಗೂ ಚಾಲಕನಾಗಿದ್ದೇನೆ. ದಿ. 25.8.2020 ರಂದು ಬೆಳಿಗ್ಗೆ 9 ರಿಂದ 9.05 ಗಂಟೆಯ ಸಮಯದಲ್ಲಿ ನಾನು ನನ್ನ ದ್ವಿಚಕ್ರ ವಾಹನದಲ್ಲಿ ನನ್ನ ಕಚೇರಿಗೆ ಹೋಗುತ್ತಿದ್ದಾಗ ಕನಕಮಜಲು ಎನ್ನುವ ಸ್ಥಳದಲ್ಲಿ ಶೇಷಪ್ಪರವರು ಅವರ ದ್ವಿಚಕ್ರ ವಾಹನದಲ್ಲಿ ಮುಖ್ಯ ರಸ್ತೆಗೆ ಬಂದು ಸೇರುವಾಗ ನಮ್ಮಿಬ್ಬರ ದ್ವಿಚಕ್ರ ವಾಹನಗಳು ಡಿಕ್ಕಿಯಾದವು. ಆ ಅಪಘಾತದ ವಿಚಾರದಲ್ಲಿ ಸುಳ್ಯ ಪೊಲೀಸರು ನನ್ನ ವಿರುದ್ಧ ಪ್ರಕರಣ ದಾಖಲಿಸಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದರು.

ಆ ಪ್ರಕರಣದಲ್ಲಿ ನಾನು ನನ್ನ ತಪ್ಪು ಒಪ್ಪಿಕೊಂಡು ನ್ಯಾಯಾಲಯ ವಿಧಿಸಿದ ದಂಡವನ್ನು ಪಾವತಿಸಿದ್ದೇನೆ. ಸಿಸಿ ನಂಃ 422/2020 ಪ್ರಕರಣದ ಆದೇಶ ಪುಟದ ದೃಢೀಕೃತ ಪ್ರತಿಯನ್ನು ನಾನು ಈಗ ನೋಡುತ್ತಿದ್ದೇನೆ. ಅದು ನ್ಯಾಯಾಲಯ ನನಗೆ

ವಿಧಿಸಿದ ಶಿಕ್ಷೆಯ ಆದೇಶವಾಗಿದೆ. ಸದರಿ ದಾಖಲೆಯನ್ನು ನಿಪಿ–29 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಯು.ಎಸ್.ಎನ್ ವಕೀಲರ ಪರ ಶ್ರೀಮತಿ ಡಿ.ಎನ್.ಎಸ್ ವಕೀಲರಿಂದಃ**

ಆ ಅಪಘಾತದ ಬಗ್ಗೆ ಪೊಲೀಸರಿಗೆ ದೂರು ನೀಡಿದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ಅಪಘಾತದ ಸಮಯದಲ್ಲಿ ಶೇಷಪ್ಪ ರವರು ಅವರ ಮನೆಯಿಂದ ಸುಳ್ಯದ ಕಡೆಗೆ ಬರುತ್ತಿದ್ದರು. ಶೇಷಪ್ಪ ರವರು ರಸ್ತೆಯ ವಿರುದ್ಧ ದಿಕ್ಕಿನಲ್ಲಿ ದ್ವಿಚಕ್ರ ವಾಹನದಲ್ಲಿ ಬಂದ ಕಾರಣ ಆ ಅಪಘಾತ ಸಂಭವಿಸಿದೆ ಎಂದರೆ ಸರಿ. ಅಪಘಾತ ರಸ್ತೆಯ ಮಧ್ಯ ಭಾಗದಲ್ಲಿ ಸಂಭವಿಸಿದೆ ಎಂದರೆ ಸರಿಯಲ್ಲ. ಅಪಘಾತ ಸಂಪೂರ್ಣ ಶೇಷಪ್ಪ ರವರ ತಪ್ಪಿನಿಂದ ಸಂಭವಿಸಿದ್ದು, ನನ್ನ ತಪ್ಪಿನಿಂದ ಸಂಭವಿಸಿಲ್ಲ ಎಂದರೆ ಸರಿ. ಅರ್ಜಿದಾರರರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1ನೇ ಎದುರುದಾರರ ಪರ ವಕೀಲರಿಂದಃ

ಈ ದಿನ 1ನೇ ಎದುರುದಾರ ಹಾಗೂ ಆತನ ವಕೀಲರು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲು ಸಕಾರಣಗಳು ಇಲ್ಲದ ಕಾರಣ 1ನೇ ಎದುರುದಾರರ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಬ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ